

**ನಿರ್ದೇಶಕರು:**

**ಅಹಮದ್ ಅಬು ನಾಸಿರ್ ಮತ್ತು ಮೊಹಮ್ಮದ್ ಅಬು ನಾಸಿರ್**

ಮೂವತ್ತರ ಆಸುಪಾಸಿನಲ್ಲಿರುವ ಈ ಉದ್ದುದ್ದ ಕೂದಲಿನ ಅವಳಿ ಸಹೋದರರಿಗೆ ಸಿನಿಮಾ ಹುಚ್ಚಲ್ಲ, ಕಲಾ ಪಯಣ. ಚಿತ್ರ ಬಿಡಿಸುವ ಅಪ್ಪನಿಂದ ಪ್ರೇರಣೆ ಪಡೆದು ಕಲಾವಿದರಾಗಿ ಹೊರಹೊಮ್ಮುವ ಉಮೇದಿಯ ಸಹೋದರರು ಅಪ್ಪಿಕೊಂಡಿದ್ದು ಸಿನಿಮಾ ಮಾಯಾಂಗನೆಯನ್ನು. ವಿದೇಶಗಳಲ್ಲಿ ಚಿತ್ರ ನಿರ್ಮಾಣದ ಎಲ್ಲ ಮಜಲುಗಳ ಜ್ಞಾನ ದಕ್ಕಿಸಿಕೊಳ್ಳುವ ಹಂಬಲದವರು. ಹಮಾಸ್‌ನಂಥ ಭಯೋತ್ಪಾದಕ ಸಂಘಟನೆಯ ಎಲ್ಲ ಬೆದರಿಕೆಗಳನ್ನು ಎದುರಿಸಿ, ಅದರ ಕಲೆಯ ವಿರೋಧವನ್ನು ಎದುರು ಹಾಕಿಕೊಂಡು ಗಾಜಾಪಟ್ಟಿಯಲ್ಲಿ ದೊಡ್ಡ ಸದ್ದು ಮಾಡುತ್ತಿರುವ ಅಪರೂಪದ ನಿರ್ದೇಶಕ ಜೋಡಿಯಿದು.

ಬಂದ ಗಂಡಸರನ್ನು ಅವರ ಅಗಾಧ ಮಿತಿಗಳ ನಡುವೆಯೂ ಒಪ್ಪಿಕೊಂಡು 'ಆದರ್ಶ' ಬದುಕು ಮುನ್ನಡೆಸಲೇಬೇಕಾದ ಅನಿವಾರ್ಯತೆಯಲ್ಲಿ ಇಲ್ಲಿನ ಹೆಂಗಸರಿದ್ದಾರೆ. ಕರ್ಮಠಿಗಳ ಇಂಥ ಹಲವು ಹುಸಿ ಆದರ್ಶಗಳನ್ನು ಗೇಲಿ ಮಾಡುವಲ್ಲಿ ಚಿತ್ರ ತುಂಬ ಧೈರ್ಯ ಪ್ರದರ್ಶಿಸಿದೆ.

'ಡೀಗ್ರೇಡ್' ಎನ್ನುವುದರರ್ಥ ಪಾರ್ಲರ್ ಅಥವಾ ಸಲೂನಿಗೆ ಸಂಬಂಧಿಸಿ ಹೇಳುವುದಾದರೆ ದಟ್ಟವಾದ ಕೂದಲುಗಳನ್ನು ಹಗುರಾಗಿಸುವುದು. ಕೂದಲು ಕಗ್ಗಂಟಾಗಿದ್ದನ್ನು ಸಡಿಸಲಗೊಳಿಸಿ ಒಪ್ಪವಾಗಿ ಕಾಣುವಂತೆ ಮಾಡುವುದು. ಇದನ್ನೇ ರೂಪಕವಾಗಿಟ್ಟುಕೊಂಡು ಗಾಜಾದಲ್ಲಿ ನಡೆಯುತ್ತಿರುವ ಹಿಂಸೆ, ಅಂತಃಕಲಹ ಮತ್ತು ಯುದ್ಧಕ್ಕೆ ಸಣ್ಣ ಪರಿಹಾರ ಸೂಚಿಸಲು 'ಡಿಗ್ರೇಡ್' ಚಿತ್ರ ಯತ್ನಿಸುತ್ತದೆ.

ಚಿತ್ರದ ಕೊನೆಯಲ್ಲಿ ಗಿರಾಕಿಗಳ ಪೈಕಿ ಓರ್ವ ಗರ್ಭಿಣಿ ಹೆರಿಗೆ ನೋವಿನಿಂದ ನರಳುತ್ತಿದ್ದರೆ ಅದೇ ಸಮಯಕ್ಕೆ ಪಾರ್ಲರ್‌ನಿಂದ ಆಚೆಗಿನ ಹೊರಗಿನ ವಾತಾವರಣ ಸಂಕೀರ್ಣವಾಗತೊಡಗುತ್ತದೆ. ಒಂದೆಡೆ ಹೊಸ ಜೀವ ಹುಟ್ಟಿಗೆ ಚಡಪಡಿಸುತ್ತಿದ್ದರೆ ಮತ್ತೊಂದೆಡೆ ಈಗಾಗಲೇ ಹುಟ್ಟಿ ಬೆಳೆದವರು ವಿನಾಶಕ್ಕಾಗಿ ನಿರ್ಣಾಯಕ ಕಚ್ಚಾಟದಲ್ಲಿ ತೊಡಗಿರುತ್ತಾರೆ. ಒಂದೆಡೆ ಮನುಷ್ಯ ಸಹಜ ಸೌಂದರ್ಯ ಪ್ರಜ್ಞೆ ತನ್ನ ಓರೆಕೋರೆಗಳನ್ನು ತಿದ್ದಿಕೊಂಡು ಒಪ್ಪವಾಗಲು ಹೆಣಗುತ್ತಿದ್ದರೆ ಮತ್ತೊಂದೆಡೆ ಧರ್ಮ ಮತ್ತು ಪ್ರತಿಷ್ಠೆಗಳು ಜನರ ಇರುವ ನೆಮ್ಮದಿಯನ್ನು ಕಡೆಗಣಿಸಿ ಪರಸ್ಪರ ಕಚ್ಚಾಟಕ್ಕಿಳಿಯುತ್ತಿವೆ. ಈ ಅಸಂಗತ ಸ್ಥಿತಿಯನ್ನು ಬಿಚ್ಚಿಡುವ 'ಡಿಗ್ರೇಡ್' ಚಿತ್ರ ಒಂದು ಅದ್ಭುತ ರಾಜಕೀಯ ಲೇವಡಿಯೂ ಹೌದು. ✿